ಮಹಾ ಮಂಡಳ ಮತ್ತು ಕರ್ನಾಟಕ ರಾಜ್ಯ ಸಹಕಾರ ಮರಾಟ ಮಹಾ ಮಂಡಳ ಇವರ ಮುಖಾಂತರ ಸರಬರಾಜು ಪಡೆಯಲಾಯಿತು.

- ಸಸ್ಯ ಸಂರಕ್ಷಣಾ ಔಷಧಿಗಳನ್ನು ತಾಲ್ಲೂಕು : ಗ್ರಾಮಪಂಚಾಯಿತಿ ದಾಸ್ತಾನು ಮಾಡಿ, ದಿನಾಂಕ:16-1-2002 ರಿಂದ 30-04-2002 ರವರೆಗೆ 1.20 ಕೋಟಿ ತೆಂಗಿನ ಮರಗಳಿಗೆ ಉಪಚರಿಸಲಾಯಿತು. ಹಾಗೂ ರೂ.11.44 ಕೋಟಿ ಖರ್ಚು ಮಾಡಲಾಗಿದೆ (ಕೇಂದ್ರ ಸರ್ಕಾರದ ಪಾಲು ರೂ.7.40 ಕೋಟಿ ಮತ್ತು ರಾಜ್ಯ ಸರ್ಕಾರದ ಪಾಲು ರೂ.4.04 ಕೋಟಿ).
- ಉಪಚಾರ ಕಾರ್ಯಕ್ರಮದ ಮುಂಚಿತವಾಗಿ ಹಾಗೂ ಉಪಚರಿಸಿದ ನಂತರ ನುಸಿ ಹತೋಟಿಯ ಮೌಲ್ಯಮಾಪನ ತಿಳಿಯಲು ಕೃಷಿ ವಿಶ್ವವಿದ್ಯಾನಿಲಯದ ಕೀಟತಜ್ಞರನ್ನು ಕೋರಿಕೊಳ್ಳಲಾಗಿದೆ.
- ನುಸಿ ನಿಯಂತ್ರಣೆಗೆ ಸಮಗ್ರ ಪರಿಸರ ಪೂರಕ ತೆಂಗು ಬೇಸಾಯ ಕ್ರಮಗಳನ್ನು ಅಳವಡಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆ.

ತೋಟಗಾರಿಕಾ ಇಲಾಖೆಯಲ್ಲಿ ಸಸ್ಯ ಸಂರಕ್ಷಣಾ ಕಾರ್ಯಕ್ರಮ

1366 (1753) ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ): ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತೋಟಗಾರಿಕಾ ಬೆಳೆಗಳು, ವಿಚಿತ್ರ ರೋಗಗಳಿಗೆ ತುತ್ತಾಗುತ್ತಾ ಇರುವುದನ್ನು ಸರಕಾರ ಗಮನಿಸಿದೆಯೇ?

ಆ) ಹಾಗಿದ್ದಲ್ಲಿ, ಸಸ್ಯ ಸಂರಕ್ಷಣಾ ಕಾರ್ಯ ಕ್ರಮಗಳನ್ನು ಮತ್ತು ಸಸ್ಯ ಸಂರಕ್ಷಣೆಯ ಬಗೆಗೆ ಸಂಶೋಧನಾ ಕಾರ್ಯಕ್ರಮಗಳನ್ನು ಇಲಾಖಾ ವತಿಯಿಂದ ಕೈಗೊಳ್ಳಲಾಗಿದೆಯೇ? ಈ ಕಾರ್ಯಗಳಿಗೆ ವಿಶೇಷ ಒತ್ತನ್ನು ನೀಡಲಾಗಿದೆಯೇ?

ಇ) ಈ ಬಗೆಗಿನ ವಿವರಗಳೇನು?

ಈ) ಸಸ್ಯ ಸಂರಕ್ಷಣೆಗೆ ಇಲಾಖೆಯಲ್ಲಿ ನಿಗದಿಪಡಿಸಲಾಗಿರುವ ಮೊತ್ತವೆಷ್ಟು?

ಶ್ರೀ ಎಂ.ಶಿವಣ್ಣ (ತೋಟಗಾರಿಕೆ ಸಚಿವರು):

ಅ) ಹೌದು

ಆ) ಹೌದು. ಸಸ್ಯಸಂರಕ್ಷಣಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಸಂಶೋಧನೆಯನ್ನು ಭಾರತೀಯ ತೋಟಗಾರಿಕೆ ಸಂಶೋಧನಾ ಕೇಂದ್ರ. ಹೆಸರಘಟ್ಟ, ಬೆಂಗಳೂರು ಹಾಗೂ ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ಮತ್ತು ಧಾರವಾಡ ಈ ಸಂಸ್ಥೆಗಳಲ್ಲಿ ಕೈಗೊಳ್ಳಲಾಗುತ್ತಿದೆ. ಹೌದು

ಇ) ತೆಂಗಿನ ಬೆಳೆಗೆ ತಗುಲಿರುವ ನುಸಿ, ಅಡಿಕೆ ಬೆಳೆಯ ಹಳದಿ ರೋಗ, ಕರಿಮೆಣಸು ಬೆಳೆಯ ಸೊರಗು ರೋಗ, ವೀಳ್ಯೆದೆಲೆ ಬೆಳೆಗೆ ತಗಲುವ ಸೊರಗುರೋಗ, ಟೊಮ್ಯಾಟೊ ಬೆಳೆಗೆ ತಗಲುವ ಬಿಳಿನೊಣ, ಮುಂತಾದ ಪ್ರಮುಖ ಕೀಟ ಮತ್ತು ರೋಗಗಳ ನಿಯಂತ್ರಣೆಗೆ ಸಂಶೋದನೆ ನಡೆಯುತ್ತಿದೆ.

ಈ) 2002-03ನೇ ಸಾಲಿನಲ್ಲಿ ರೂ.556.00 ಲಕ್ಷ ನಿಗದಿಪಡಿಸಿದೆ.